Regd No Bo 155 1-12-1969

SATYAVADI Daily, MYSORE 4 ★ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದಿನೇಶ ಸಿಂಗರ ಮುಂದೆ ಕಪ್ಪು ಬಾವುಟ ಪ್ರದರ್ಶನ

ಪಾಕಿಸ್ಥಾನದಲ್ಲಿ ಜನಸಂಖ್ಯೆ

ನವದೆಹಲಿ— ಕಳೆದ ಒಂಪು ದಶಕದಲ್ಲಿ ಪಾಕಿಸ್ಥಾನದಲ್ಲಿ ಮುಸ್ಲಿಮೇತರರ ಸಂಖ್ಯೆ ಶೇಕಡ 14 ರಿಂದ 11 ಕ್ಕೆ ಇಳಿದಿರುವದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಹೊಸ ಚಂದ್ರಶಿಲೆ

ಸ್ಪೇಸ್‌ಸೆಂಟರ್ (ಹೌಸ್ಟನ್)— ಅಪೊಲೊ 11 ರಲ್ಲಿ ತಂದ ಚಂದ್ರಶಿಲೆಗಳೂ, ಈಗ ತರಲಾದ ಹೊಳೆಯುವ ಗಾಜು ಲೇಪಿತ ಚಂದ್ರಶಿಲೆಗಳೂ ವಿಜ್ಞಾನಿಗಳಿಗೆ ಗಲಬಿಲಿ ಉಂಟುಮಾಡಿದೆ.

●

ಮಾವೋ ಭಿತ್ತಿಪತ್ರ

ಷಿಲಾಂಗ್— ಗೌಹತಿಯ ಗೋಡೆ ಮೇಲೆ ಮಾವೋ ಭಿತ್ತಿಪತ್ರಗಳು ಕಾಣಿಸಿಕೊಂಡಿವೆ – ದಂಗೆ ಏಳುವಂತೆ ಆದರಲ್ಲಿ ಪ್ರಚೋದಿಸಲಾಗಿದೆ.

○

ಗಡಿ ವ್ಯಾಜ್ಯ

ನವದೆಹಲಿ— ಕ್ಷಿಪ್ರದಲ್ಲೇ ಮೈಸೂರು ಮಹಾರಾಷ್ಟ್ರ ಗಡಿ ವ್ಯಾಜ್ಯ ಪರಿಹಾರಕ್ಕೆ ಸಕಲ ಪ್ರಯತ್ನಗಳೂ ನಡೆಸಲಾಗುವುದೆಂದು ಪ್ರಧಾನಿ ಇಂದಿರಾರವರು ಲೋಕಸಭಾ ಸದಸ್ಯ ಶ್ರೀ ನಾಥ್ ಪೈರಿಗೆ ತಿಳಿಸಿದರು.

★

ಪ್ರಧಾನಿ ರಾಜೀನಾಮೆ ಕೊಡಲಿ

ನೈಜಾಮಾಬಾದು— ಜನ ಸಂಘದ ಆಂಧ್ರ ಪ್ರದೇಶ ಶಾಖೆಯು ಪ್ರಧಾನಿ ಇಂದಿರಾರವರು ರಾಜೀನಾಮೆ ಕೊಡಬೇಕೆಂದು ಕೇಳಿಕೆ ಹಾಕಿದೆ.

★

ದಿವ್ಯವಾಣಿ

ಸ್ವರ್ಣ ಯುಗಕ್ಕೆ ಗೋಳಾಡುವವರು ಸ್ವರ್ಣ ಜನತೆಗೂ ಗೋಳಾಡುವರು.

ಥೋರೋ

ಕಪ್ಪು ಬಾವುಟ ಪ್ರದರ್ಶನ

ಇಂಡೋರು— ಇಲ್ಲಿಗೆ ಆಗಮಿಸಿದ ಭಾರತ ವಿದೇಶಾಂಗ ಮಂತ್ರಿ ಶ್ರೀ ದಿನೇಶ ಸಿಂಗರ ಮುಂದೆ ಹಿಂದೂ ಮಹಾಸಭೆಯವರು ಕಪ್ಪು ಬಾವುಟ ಪ್ರದರ್ಶಿಸಿದರು – ರಾಬರ್ಟ್ ಬಗ್ಗೆ ಅವರು ರಾಜೀನಾಮೆ ಕೊಡಬೇಕೆಂದು ಕೇಳಿಕೆ ಹಾಕಿದರು.

★

ದೇವರ ಮಹಿಮೆ

ತಿರುಪತಿ ವೆಂಕಟರಮಣ ಸ್ವಾಮಿಗೆ ಭಂಗಾರದ ಅಭಿಷೇಕ ಪಾತ್ರೆಯನ್ನು ಇಡಲು ಅಡಳಿತ ವರ್ಗದವರು ಯೋಚಿಸಿದರೆಂದೂ, ಅದೇ ಸಮಯದಲ್ಲಿ ಸ್ವಾಮಿಯು ಒಬ್ಬ ಭಕ್ತನ ಕನಸಿನಲ್ಲಿ ಕಾಣಿಸಿಕೊಂಡು ಚಿನ್ನದ ಅಭಿಷೇಕದ ಪಾತ್ರೆ ಮಾಡಿಸಿ ಕೊಡುವಂತೆ ತಿಳಿಸಿದನೆಂದೂ, ಅವನು ಹಾಗೇ ಮಾಡಿ ಕಬ್ಬಿಣ ಪೆಟ್ಟಿಗೆಯಲ್ಲಿಟ್ಟು ಸ್ವಾಮಿಗೆ ಅರ್ಪಿಸುವದನ್ನು ಮರೆತುಬಿಟ್ಟನೆಂದೂ, ಅವನ ಮನೆಗೆ ಕಳ್ಳರು ನುಗ್ಗಿ ಪೆಟ್ಟಿಗೆಯಲ್ಲಿದ್ದ ರೂ. 60000 ಬೆಲೆಯ ಹಣ ಮತ್ತು ಒಡವೆಗಳನ್ನು ದೋಚಿಕೊಂಡು ಹೋದರೆಂದೂ ಆದರೆ ಚಿನ್ನದ ಅಭಿಷೇಕ ಪಾತ್ರೆ ತಂಟೆಗೆ ಹೋಗಲಿಲ್ಲವೆಂದೂ, ಆವನು ಸ್ವಾಮಿಗೆ ಪಾತ್ರೆ ಅರ್ಪಿಸಿದನೆಂದೂ ನಂತರ ಕಳುವಾಗಿದ್ದ ಅವನ ಒಡವೆ, ಹಣ ಪತ್ತೆಯಾಯಿತೆಂದೂ, ತಿರುಪತಿ ದೇವಾಲಯಗಳ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಚಂದ್ರಮೌಳಿ ಹೇಳಿದರು.

★

ಕಲಾ ಮಹೋತ್ಸವ

ಮೈಸೂರು – ಪುರಸಭೆ ವ್ಯವಸ್ಥೆಗೊಳಿಸಿರುವ ಎಂಟು ದಿನಗಳ ಕಲಾ ಮಹೋತ್ಸವದ ಪ್ರಾರಂಭೋತ್ಸವವನ್ನು ಟೌನ್‌ಹಾಲ್‌ನಲ್ಲಿ ನಿನ್ನೆ ವಾರ್ತಾ ಮತ್ತು ಕೈಗಾರಿಕಾ ಮಂತ್ರಿ ಶ್ರೀ ರಾಜಶೇಖರಮೂರ್ತಿಯವರು ನೆರವೇರಿಸಿದರು.

ಅಪೊಲೊ 11 ಮತ್ತು 12 ಚಂದ್ರಗ್ರಹಕ್ಕೆ ಹೋಗಿಲ್ಲ!

ಬೊಂಬಾಯಿ— ಭೂಮಿ ಚಪ್ಪಟೆಯಾಗಿದೆ ಎಂಬ ತತ್ವದ ಪ್ರತಿಪಾದಕರಾದ ಜೈನ ಮುನಿ ಅಭಯಸಾಗರಜೀಯವರು ಎರಡು ಅಪೊಲೊ ಬಹಿರಾಕಾಶ ವಿಮಾನಗಳು ಭೂಮಿಯ ಯಾವುದೋ ದೂರಪ್ರದೇಶದಲ್ಲಿ ಇಳಿದಿದ್ದವೆಂದೂ, ಚಂದ್ರನ ಮೇಲಲ್ಲವೆಂದೂ ಹೇಳಿರುವರು.

○

ಕಬ್ಬಿಣ ಮಿಶ್ರ ಮರಳು

ಷಿಲಾಂಗು— ಉತ್ತರ ಲಕ್ಷ್ಮಿಪುರದ ದಿಬ್ಬಮುಖ ನದಿಯ ದಡದಲ್ಲಿ ಕಬ್ಬಿಣ ಮಿಶ್ರ ಮರಳು ಪತ್ತೆಯಾಗಿದೆ.

★

ರಾಷ್ಟ್ರೀಕರಣ ಬೇಜಾರ್ಮಾಡಿದೆ

ಭೂಪಾಲ್— ಮಾಹ್ವ ಮುಂತಾದ ಐದು ಕಡೆ ಇರುವ ಬಸ್ ರಾಷ್ಟ್ರೀಕರಣ ವಜಾಮಾಡಿ, ಅವುಗಳಲ್ಲಿ ಬಸ್ ನಡೆಸಲು ಖಾಸಗಿಯವರನ್ನು ಆಹ್ವಾನಿಸಲಾಗುವದೆಂದು ಸಾರಿಗೆ ಮಂತ್ರಿ ಹೇಳಿರುವರು – ನಗರದ ಬಸ್ ನಡೆಸುವದರಲ್ಲಿ ವರ್ಷಕ್ಕೆ ರೂ 20 ಲಕ್ಷ ನಷ್ಟವಾಗುತ್ತಿರುವದೆಂದೂ ಹೇಳಿದರು.

★

ಕೆನ್ನೆ ಕಚ್ಚಿದಳು

ಬೊಂಬಾಯಿ— ಮಧ್ಯ ಬೊಂಬಾಯಿನ ಚೆಂಚವೋಕ್ಲಿ ಭಾಗದಲ್ಲಿ ಕಾಲದಾರಿಯಲ್ಲಿ ಕೂಗಿಕೊಂಡು ಎಗ್ಗಾಟಮಾಡುವರನ್ನು ಪೋಲೀಸು ವ್ಯಾನಿಗೆ ತುಂಬುತ್ತಿದ್ದಾಗ ಬಾಳೇಹಣ್ಣು ಮಾರುವನೊಬ್ಬನು ಒಬ್ಬ ಪೋಸಿನವನ ಮುಖವನ್ನು ಬಲವಾಗಿ ಕಚ್ಚಿದನು.

★

ಮುಖ್ಯ ಮಂತ್ರಿಗಳ ಉಪವಾಸ

ಕಲ್ಕತ್ತಾ— ನ್ಯಾಯಬಾಹಿರ, ಹಿಂಭಯೊತ್ಪಾತಕ ಹಾವಳಿ ವಿರೋಧಿಸಿ 15000 ಶಾಂತಿ ಫೌಜಿನ ಸತ್ಯಾಗ್ರಹವನ್ನು ಪ್ರಾರಂಭವಾಯಿತು – ಮುಖ್ಯಮಂತ್ರಿ ಶ್ರೀ ಅಜಾಯ್ ಘೋಷರು ಕಜರ್ನ ಪಾರ್ಕಿನಲ್ಲಿ ಸತ್ಯಾಗ್ರಹ ನಡೆಸಿ ಮೂರು ದಿನಗಳ ಉಪವಾಸ ನಡೆಸುವರು – ಸತ್ಯಾಗ್ರಹವು 150 ಕೇಂದ್ರಗಳಲ್ಲಿ 97 ಶಾಸನಸಭಾ ಕ್ಷೇತ್ರಗಳಲ್ಲಿ ನಡೆಯುವುದು — ಮುಖ್ಯ ಮಂತಿಗಳ ಜೊತೆಯಲ್ಲಿ ಹೈ ಕೋರ್ಟು ಜಡ್ಜರು ಶ್ರೀ ಮಿತ್ತರ್‌ರವರ 80 ವರ್ಷದ ತಾಯಿ ಮತ್ತಿತರ 30 ಮಂದಿ ಉಪವಾಸ ಆಚರಿಸುವರು.

●

ನೈಜಾಮರ ಅರಮನೆ ಹೋಟಲ್ಲಾಯ್ತು

ಹೈದರಾಬಾದು— ನೈಜಾಮರ ಅಪರಿಮಿತ ಸಂಪತ್ತನ್ನು ಇತ್ತುತ್ತಿದ್ದ ಫಲಾಕನುಮಾ ಅರಮನೆಯು ಹೋಟಲ್ಲಾಗಿ ಪರಿವರ್ತಿತವಾಗುವುದೆಂದು ಆಂಧ್ರ ಪ್ರಮಾಸ ಮಂತ್ರಿ ರೋಡಾ ಮಿಸ್ತ್ರಿ ಹೇಳಿದರು — ಹೈದರಾಬಾದು ಸ್ವತಂತ್ರವಾಗಿದ್ದಾಗ ಮಾಜಿ ನೈಜಾಮರು ಅತಿಥಿಗಳಿಗೆ ಸತ್ಕಾರ ಏರ್ಪಡಿಸುತ್ತಿದ್ದರು — ಅದಕ್ಕಾಗಿ 12 ಭಂಗಾರದ ಊಟದ ಸೆಟ್ ಇಡಲಾಗಿತ್ತು.

●

ಪಾಕಿಸ್ಥಾನದಲ್ಲಿ ರಕ್ಷಣಾ ವ್ಯವಸ್ಥೆ

ನವದೆಹಲಿ— ಪಾಕಿಸ್ಥಾನವು ಪ್ರದೇಶ, ಜನಸಂಖ್ಯೆ, ರಾಷ್ಟ್ರೀಯ ಉತ್ಪಾದನೆ, ತೀರ ಪ್ರದೇಶದ ಉದ್ದ, ದೇಶದ ಸೂಕ್ಷ್ಮ ಗಡಿಗಳನ್ನು ಲೆಕ್ಕಿಸಿದರೆ, ಭಾರತಕ್ಕಿಂತಲೂ ಹೆಚ್ಚಾಗಿ ರಕ್ಷಣಾ ಕಾರ್ಯಕ್ಕಾಗಿ ವಿನಿಯೋಗಿಸುತ್ತಿರುವುದು ಹೊರಪಟ್ಟಿದೆ – ರಕ್ಷಣಾ ಪೆಚ್ಚ 1969 ರಲ್ಲಿ ಪಾಕಿಸ್ಥಾನವು 542 ಡಾಲರುಗಳಿಗೆ ಹೆಚ್ಚಿಸಿತೆಂದೂ, ಭಾರತವು 1491 ಡಾಲರಿಗೆ ಹೆಚ್ಚಿಸಿತೆಂದೂ ಪ್ರಕಟವಾಗಿದೆ.

ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯ

ಗಾಂಧೀಜೀಯವರು ಅಂತರ್ಜಾತೀಯ ವಿವಾಹದ ಪ್ರತಿಬಂಧಕವು ಸಮಾಜಕ್ಕೆ ಶ್ರೇಯೋಜನಕಾರಿ ಎಂದು 1921 ರಲ್ಲಿ ಬರೆದಿದ್ದರು ; ಆದರೆ ಅವರ 1931 ರಲ್ಲಿ ಆ ಪದ್ಧತಿ ವಜಾಮಾಡಬೇಕೆಂದು ಬರೆದಿದ್ದಾರೆ.

ಕಾಂಗ್ರೆಸ್ಸನ್ನು ಅನುಸರಿಸಿ ಜೈಲುವಾಸ ಅನುಭವಿಸಿದ ಕಾಂಗ್ರೆಸ್ ಕಾರ್ಯಕರ್ತ ಚಿಟಗಾಂಗಿನ ಜ್ಯೋತಿ ಪತ್ರಿಕೆ ಸಂಪಾದಕರಾದ ಶ್ರೀ ಕಾಳಿಶಂಕರ ಚಕ್ರವರ್ತಿಯವರು, ಹೀಗೆ ಒಂದಕ್ಕೊಂದು ವಿರುದ್ಧ ಹೇಳಿಕೆಯನ್ನು ಹೇಗೆ ಕೊಟ್ಟರೆಂದು ಗಾಂಧೀಜೀಯವರಿಗೆ ಬರೆದರು.

ಅದಕ್ಕೆ ಗಾಂಧೀಜಿಯವರು, 1921 ರಲ್ಲಿ ತನು ಯಾವುದು ಸರಿಯಾಗಿ ಕಂಡುಬಂದಿತೋ ಅದನ್ನು 1921 ರಲ್ಲಿ ಬರೆದುದಾಗಿಯೂ, 1931 ರಲ್ಲಿ ಯಾವುದು ಸರಿಯಾಗಿ ಕಂಡುಬಂದಿತೋ ಅದನ್ನು 1931 ರಲ್ಲಿ ಬರೆದುದಾಗಿಯೂ ತಿಳಿಸಿದರು.

1921 ರಿಂದ 1931 ರೊಳಗೆ ಅವರ ಮಗ ದೇವದಾಸ್ ಬ್ರಾಹ್ಮಣರಾದ ರಾಜ ಶ್ರೀ ರಾಜಗೋಪಾಲಾಚಾರಿಯವರ ಮಗಳನ್ನು ಮದುವೆಯಾದುದನ್ನು ಗಮನಿಸಬಹುದಾಗಿದೆ. (ಟ್ರೂತ್)

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಸಾವತಿಮಾಡುವ ಅಡ್ರೆಸ್

1 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು.

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ

SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಪಚ್ಚೆ ಸೇರಿ ವರ್ಷಕ್ಕೆ ರೂ 10-0)
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾರಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ಸ್ ಅನೋಫೆ 3 ನೇ ವಾರ
ಶಿನ ಅನೋಫೆ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹ ಮ್ ಸಾ ಯ
ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್
ಸಂಗೀತ : ಓ. ಪಿ. ನಯ್ಯರ್
[ದಿನ 3 ಪ್ರದರ್ಶನಗಳು]

ಆಪೆರಾ— ಜಯಪ್ರದ 2ನೇ ವಾರ
.... ಅತ್ಯನೋಫ ತಮಿಳು ಚಿತ್ರ ....
ದೆವಮಗನ್
ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿ ಚಾಲ್ತಿಗೆ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protectthe Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4